ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೆರಡನೆಯ ಅಧಿವೇಶನ

ಮಂಗಳವಾರ, ದಿನಾಂಕ : 08 ನೇ ಡಿಸೆಂಬರ್, 2020

ಎಂ ಸ್ಯಾಂಡ್ ಘಟಕಗಳ ಕುರಿತು

ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು):-

153 (188) ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿರುವ ಎಂ ಸ್ಯಾಂಡ್ ಘಟಕಗಳು ಎಷ್ಟು; ಈ ಘಟಕಗಳಿಂದ ವರ್ಷಕ್ಕೆ ಎಷ್ಟು ಟನ್ ಎಂ ಸ್ಯಾಂಡ್ ಉತ್ಪಾದನೆಯಾಗುತ್ತದೆ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಈ ಘಟಕಗಳಲ್ಲಿ ಉತ್ಪಾದನೆಯಾಗುವ ಒಂದು ಟನ್ ಎಂ ಸ್ಯಾಂಡ್‌ಗೆ ಸರ್ಕಾರವು ಎಷ್ಟು ಮೊತ್ತವನ್ನು ನಿಗದಿ ಮಾಡಿದೆ;

(ಇ) ಸರ್ಕಾರವು ವಿದೇಶದಿಂದ ಎಷ್ಟು ಟನ್ ಎಂ ಸ್ಯಾಂಡ್ ಆಮದು ಮಾಡಿಕೊಂಡಿದೆ; ಇದಕ್ಕೆ ಎಷ್ಟು ಮೊತ್ತವನ್ನು ಪಾವತಿಸಲಾಗಿದೆ; ವಿದೇಶದಿಂದ ಆಮದಾದ ಎಂ ಸ್ಯಾಂಡ್ ಗೆ ಟನ್ ಒಂದಕ್ಕೆ ಸರ್ಕಾರ ನಿಗಧಿಪಡಿಸಿದ ಮೊತ್ತವೆಷ್ಟು;

(ಈ) ಸರ್ಕಾರವು ಕಳೆದ 3 ವರ್ಷಗಳಲ್ಲಿ ಎಷ್ಟು ಪ್ರಮಾಣದ ಮರಳನ್ನು ವಿದೇಶಗಳಿಂದ ಆಮದು ಮಾಡಿಕೊಂಡಿದೆ; ಅದರಲ್ಲಿ ಗ್ರಾಹಕರಿಗೆ ಮಾರಾಟ ಮಾಡಲಾದ ಮರಳಿನ ಪ್ರಮಾಣವೆಷ್ಟು; ಈ ಮರಳನ್ನು ಎಲ್ಲಿ ಸಂಗ್ರಹಿಸಲಾಗಿದೆ?